ಮಿಹಿರ ತಲೆ ಕೊಡವಿ ಅಮ್ಮನತ್ತ ನೋಡಿದ. ಅಲ್ಲಿ ದುಃಖವಿದೆಯೋ, ನಿರಾಳತೆಯಿದೆಯೋ, ನಿರಾಸೆಯಿದೆಯೋ ಉಹೂಂ ಗೊತ್ತಾಗಲೇ ಇಲ್ಲ. ತಿಂಗಳಿನಿಂದ ಕೊಂಚ ಮೆತ್ತಗೇ ಇದ್ದ ಅಪ್ಪ ಈಗ ಇದ್ದಕ್ಕಿದ್ದಂತೆ ಇಲ್ಲವಾದ ಎಂದರೆ...

‘ಪರಿಸ್ಥಿತಿ ಗಂಭೀರವಾಗಿದೆ, ಐಸಿಯುನಲ್ಲಿರಿಸಬೇಕು’ ಎಂದು ಬೆಳಗ್ಗೆ ಡಾಕ್ಟರು ಹೇಳಿದಾಗ ಜೊತೆಗಿದ್ದ ಚಿಕ್ಕಪ್ಪ ಮುಖ ಒಂದು ರೀತಿ ಮಾಡಿದ್ದು ಮಿಹಿರನ ಗಮನಕ್ಕೆ ಬಂದಿತ್ತು. ‘ಈ ದೊಡ್ಡ ದೊಡ್ಡ ಆಸ್ಪತ್ರೆಗಳ ಲಕ್ಷಣಾನೆ ಇಷ್ಟು; ಸುಮ್ಮನೆ ಅದೂ ಇದೂಂತ ಹೆದರಿಸಿ ದುಡ್ಡು ಎಳೀತಾರಷ್ಟೆ’ ಎನ್ನುವ ಅವರ ಮಾತಿಗೆ ಅಮ್ಮನ ಅಗಲಿಸಿದ ಕಣ್ಣು ತಡೆ ಒಡ್ಡಿತ್ತು. ಈ ಅಮ್ಮ ಮೊದಲಿನಿಂದಲೂ ಹಾಗೇ ಅಲ್ಲವೆ. ಶಬ್ದಗಳಿಗಿಂತ ಜಾಸ್ತಿ ಮೌನದಲ್ಲೇ ಮಾತಾಡುವವಳು. ಮೌನದಲ್ಲೇ ಎಲ್ಲರ ಬಾಯಿ ಮುಚ್ಚಿಸುವ ತಾಕತ್ತು ಈ ಅಮ್ಮನಿಗೆ ಎಲ್ಲಿಂದ ಬಂತು ಎಂದು ಮಿಹಿರ ಬಹಳಷ್ಟು ಸಾರಿ ಯೋಚಿಸಿದ್ದಿದೆ. ಬಾಯಿಬಿಟ್ಟು ಅಮ್ಮನನ್ನು ಕೇಳಿದ್ದೂ ಇದೆ. ಆಗೆಲ್ಲ ಅವಳ ಕಣ್ಣು ನಗುತ್ತಿತ್ತೇ ಹೊರತು ಇನ್ನಾವ ಉತ್ತರ ಸಿಗುತ್ತಿರಲಿಲ್ಲ. ‘ಲೋ ನೀನಿದನ್ನೆಲ್ಲಾ ಅರ್ಥ ಮಾಡಿಕೊಳ್ಳಬೇಕಾದರೆ ಇನ್ನಷ್ಟು ಕೂದಲು ಬೆಳ್ಳಗಾಗಬೇಕು’ ಎಂದು ಅಪ್ಪ ಕಂಡೂ ಕಾಣದಂತೆ ನಗುತ್ತಿದ್ದುದು ಇನ್ನೂ ಮಿಹಿರನ ಕಣ್ಣಿಗೆ ಕಟ್ಟಿದಂತಿದೆ.

ಮೊನ್ನೆ ಮೊನ್ನೆ ಮನೆಯ ಕಂಪೌಂಡಿನೊಳಗೆ ಬೆಳೆದಿದ್ದ ತಣ್ಣನೆಯ ಸುವಾಸಿತ ಗಾಳಿ ಬೀಸುತ್ತಾ ನಿಂತಿದ್ದ ಬೇವಿನ ಮರವನ್ನ ಬೆಸ್ಕಾಂನವರು ವಿದ್ಯುತ್ ತಂತಿಗಳಿಗೆ ಅಡ್ಡವಾಗುತ್ತಿದೆಯೆಂದು ಕಡಿದಾಗ ಅಪ್ಪ ಅದೆಷ್ಟು ನೊಂದಿದ್ದ. ದಾರಿಗೆದುರಾದುದನ್ನೆಲ್ಲ ಕಡಿದೊಗೆವ ಮನುಷ್ಯನ ಕಟುಕತನ ಅವನಿಗೆ ಅರ್ಥವಾಗುವಂತೇ ಇರಲಿಲ್ಲ. ಹೇಗಾದೀತು? ಪುಣ್ಯಕೋಟಿಯ ಅಪರಾವತಾರ ಎಂದೇ ಅವನ ಸ್ನೇಹಿತರು, ಬಂಧುಗಳು ಹಾಸ್ಯ ಮಾಡುತ್ತಿದ್ದರಲ್ಲ! ಅಪ್ಪ ನಕ್ಕರೆ ಅಮ್ಮನ ಕಣ್ಣು ಜಗ್ಗನೆ ಬೆಳಗುತ್ತಿತ್ತು. ಆ ಬೆಳಕೇ ಸಾಕು ಅಪ್ಪನಲ್ಲಿ ಹೊಸ ಉತ್ಸಾಹ ತುಂಬಲು ಎಂಬುದನ್ನ ಮಿಹಿರ ಬಹಳಷ್ಟು ಸಾರಿ ಗಮನಿಸಿದ್ದ.

ಅಷ್ಟಕ್ಕೂ ಅಪ್ಪನಿಗೆ ಇಷ್ಟು ಬೇಗ ಸಾಯುವಂತಹದ್ದು ಏನೂ ಆಗಿರಲಿಲ್ಲವಲ್ಲ. ಈಗೊಂದು ತಿಂಗಳ ಹಿಂದೆ ಸಂಬಂಧಿಕರೊಬ್ಬರ ಮನೆಯಲ್ಲಿ ಯಾವುದೋ ಶುಭಕಾರ್ಯ ಎಂದು ಊಟಕ್ಕೆ ಹೋದ ಅಪ್ಪ ರಾತ್ರಿ ಕೆಂಡದಂತ ಜ್ವರವೇರಿಸಿಕೊಂಡು ನರಳಿದ್ದ. ಎಲ್ಲಾ ಕಡೆ ನೀರು ಕುಡಿಯಬೇಡಿ, ಗಂಟಲೋ ಹೊಟ್ಟೆಯೋ ಕೆಟ್ಟೀತು ಎನ್ನುವ ಅಮ್ಮನ ಎಚ್ಚರಿಕೆಯ ಮಾತು ಮೀರಿ ಅಲ್ಲಿ ನೀರು ಕುಡಿದದ್ದರ ಪರಿಣಾಮವೋ ಸವೆಯುತ್ತಿರುವ ವಯಸ್ಸಿನೊಂದಿಗೆ ಕುಗ್ಗುತ್ತಿರುವ ಇಮ್ಯೂನಿಟಿಯ ಪರಿಣಾಮವೋ ಗಂಟಲು ಕೆಟ್ಟು ಜ್ವರ ಬಂದು ನಾಲ್ಕು ದಿನ ಮಲಗಿಸಿಯೇ ಬಿಟ್ಟಿತ್ತು. ಅಮ್ಮ ಬಹಳ ಕಳವಳಿಸಿದ್ದಳು. ಏನೂ ಆಗುವುದಿಲ್ಲ ಎಂದು ಸಮಾಧಾನಿಸಿದರೂ ಅವಳ ತಳಮಳ ಕಡಿಮೆಯಾಗಿರಲಿಲ್ಲ. ತಾನು ರಜೆ ಹಾಕಲು ಒದ್ದಾಡಿದ್ದನ್ನು ನೋಡಿಯೋ ಅಥವಾ ಹೆಂಡತಿ ರಾಶಿ ಮಾವನಿಗೆ ಗಂಜಿ, ಮೆತ್ತಗಿನ ಅನ್ನ, ಕಟ್ಟು ಸಾರು ಎಂದು ಪ್ರತ್ಯೇಕವಾಗಿ ಪಥ್ಯದ ಅಡಿಗೆ ಮಾಡಿಡಲು ಕಂಡೂ ಕಾಣದ ಅಸಹನೆ ತೋರಿದ್ದಕ್ಕೋ ಏನೋ ಈ ಅಮ್ಮ ತಳಮಳಿಸುತ್ತಿದ್ದಾಳೆ ಎಂದು ಅರಿಯಲಾರದ ಗುಗ್ಗುವೇನಲ್ಲ ಮಿಹಿರ. ಅಪ್ಪ ಅಮ್ಮ ಎನ್ನುವ ಕಾಳಜಿ ಬಹಳವೇ ಇದ್ದರೂ ಅವನು ತಾನೆ ಏನು